# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 214 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 27.02.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 214 • PRGI No:KARKAN/2023/88055 • VIJAYANAGARA • 27.02.2025 • Thursday • Page:04 • Rs:2







# ಹಂಪಿ ಉತ್ಸವ ಎಂಪಿ ಪ್ರಕಾಶ ವೇದಿಕೆ ಸಿದ್ಧತೆ ಜೋರು



## ವಿಜಯನಗರದ ವಾಸ್ತುಶಿಲ್ಪ ಬಿಂಬಿಸುವ ಪ್ರಧಾನ ವೇದಿಕೆ

### 70 ಸಾವಿರ ಆಸನಗಳ ವ್ಯವಸ್ಥೆ | 300ಕ್ಕೂ ಅಧಿಕ ಸಾರಿಗೆ ಬಸ್ ಸೌಲಭ್ಯ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ–2025 ಆಚರಣೆಯ ಅಂತಿಮ ಸಿದ್ದತೆಗಳು ಪೂರ್ಣಗೊಂಡಿದ್ದು, ಗಾಯಿತ್ರಿ ಪೀಠದ ಮೈದಾನದಲ್ಲಿ ನಿರ್ಮಿಸಲಾಗಿರುವ ಪ್ರಧಾನ ವೇದಿಕೆ ವಿಜಯನಗರ ಸಾಮ್ರಾಜ್ಯದ ವಾಸ್ತುಶಿಲ್ಪದ ವೈಭವವನ್ನು ಬಿಂಬಿಸುತ್ತಿದೆ. ಹಂಪಿ ಪ್ರಮುಖ ಸ್ಮಾರಕಗಳ ಸಮ್ಮಿಶ್ರಣದಲ್ಲಿ ವೇದಿಕೆ ರಚನೆಯಲ್ಲಿ ಮೂಡಿ ಬಂದಿದೆ. ಹೊಯ್ಸಳ, ಚೋಳ ಸೇರಿದಂತೆ ಹಲವು ಮಹೋನ್ನತ ಸಾಮ್ರಾಜ್ಯಗಳ ವಾಸ್ತುಶಿಲ್ಪಗಳ ಜೊತೆ ಇಸ್ಲಾಮಿಕ್ ವಾಸ್ತುಶಿಲ್ಪ ಶೈಲಿಯನ್ನು ಸಹ ಮೈಗೂಡಿಕೊಂಡಿದ್ದ, ವಿಜಯನಗರ ಸಾಮ್ರಾಜ್ಯದ ವಾಸ್ತುಶಿಲ್ಪ ಕೋಮು ಸಾಮರಸ್ಯದ ಪ್ರತೀಕವಾಗಿದೆ.

ಈ ಬಾರಿಯ ಪ್ರಧಾನ ವೇದಿಕೆಗೆ ಹಂಪಿ ಉತ್ಸವದ ರೂವಾರಿ, ಮಾಜಿ ಉಪಮುಖ್ಯ ಮಂತ್ರಿ ಹಾಗೂ ಮುತ್ಸದ್ದಿ ರಾಜಕಾರಣಿ ಎಂ.ಪಿ.ಪ್ರಕಾಶ್ ಅವರ ಹೆಸರು ಇಡಲಾಗಿದೆ. 120/80 ಅಡಿ ವಿಸ್ತೀರ್ಣದಲ್ಲಿ ವೇದಿಕೆ ನಿರ್ಮಿಸಲಾಗಿದೆ. ವಿಶ್ವದ ಅತಿದೊಡ್ಡ ಬಯಲು ವಸ್ತು ಸಂಗ್ರಹಾಲಯ ಎಂದು ಕರೆಯಲ್ಪಡುವ ಹಂಪಿಯ ಪ್ರಮುಖ ಸ್ಮಾರಕಗಳ ಚಿತ್ರಣವನ್ನು ಒಂದು ವೇದಿಕೆಯಲ್ಲಿ ನೋಡುಗರು ಕಣ್ತುಂಬಿಕೊಳ್ಳಬಹುದು. ವೇದಿಕೆ ಮಧ್ಯ ಭಾಗದಲ್ಲಿ ಹಜಾರಾಮ ವಿಜಯ ವಿಠ್ಠಲ ದೇವಸ್ಥಾನ, ಅದರ ಮೇಲೆ ವಿಶ್ವವಿಖ್ಯಾತ ಕಮಲ ಮಹಲ್ ಪ್ರತಿಕೃತಿಗಳನ್ನು ನಿರ್ಮಿಸಲಾಗಿದೆ.

> **ಹಂಪಿ ಉತ್ಸವ ಪ್ರಧಾನ ವೇದಿಕೆಗೆ ಮಾಜಿ ಡಿಸಿಎಂ ಹಂಪಿ ಉತ್ಸವದ ರೂವಾರಿ ಎಂ.ಪಿ.ಪ್ರಕಾಶ ಅವರ ಹೆಸರಿಟ್ಟಿದ್ದು, ವೇದಿಕೆಯ ಮೆರಗು ಹೆಚ್ಚಿಸಿದೆ. ಶಾಸಕ ಹೆಚ್.ಆರ್.ಗವಿಯಪ್ಪ ಅವರ ಮಾರ್ಗದರ್ಶನದಲ್ಲಿ ಹಂಪಿ ಉತ್ಸವದ ಎಲ್ಲ ಕಾರ್ಯಕ್ರಗಳನ್ನು ಕೈಗೊಳ್ಳಲಾಗಿದೆ. ಬಳ್ಳಾರಿ, ಕೊಪ್ಪಳ, ಹೊಸಪೇಟೆ ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಯ ಜನರಿಗೆ ಹಂಪಿ ಉತ್ಸವ ನಾಡಹಬ್ಬವಿದ್ದಂತೆ. ಸಾರ್ವಜನಿಕರು ಉತ್ಸವಕ್ಕೆ ಆಗಮಿಸಲು 300 ಬಸ್‌ಗಳನ್ನು ನಿಯೋಜಿಸಲಾಗಿತ್ತು. ಇನ್ನೂ 50 ಬಸ್‌ಗಳ ನಿಯೋಜನೆಗೆ ಬೇಡಿಕೆ ಬಂದಿದ್ದು, ಇದನ್ನು ಪರಿಗಣಿಸಿ ಬಸ್‌ಗಳ ಸಂಖ್ಯೆ ಹೆಚ್ಚಿಸಲಾಗುವುದು. ಜನರು ಉತ್ಸವದಲ್ಲಿ ಪಾಲ್ಗೊಂಡು ಯಶಸ್ವಿಯಾಗೊಳಿಸಿ.**
>
> **– ಜಮೀರ್ ಅಹ್ಮದ್ ಖಾನ್ ಸಚಿವ**

ಇದರ ಒಳಗಡೆ ಸಪ್ತ ಸ್ವರ ಕಂಬಗಳು, ಹಂಪಿಯ ವಿಶಿಷ್ಟ ರಚನೆ ಎನಿಸಿರುವ ಕದುರೆ ಸಿಂಹಾಕೃತಿಗಳು ಇವೆ. ಇಸ್ಲಾಮಿಕ್ ಶೈಲಿಯ ಸುಂದರ ಕಿಟಕಿಗಳ ರಚನೆಯನ್ನು ಸಹ ಕಾಣಬಹುದು.

ವೇದಿಕೆ ಬಲಬಾಗದಲ್ಲಿ ಹೇಮಕೂಟದಲ್ಲಿನ ಸೂರ್ಯಾಸ್ತ ವೀಕ್ಷಣ ಸ್ಥಳದಲ್ಲಿನ ಕಲ್ಲಿನ ಮಂಟಪದ ಪ್ರತಿಕೃತಿಯ ಮೇಲೆ ಅಂಜನಾದ್ರಿಯ ಹನುಮನ ಮೂರ್ತಿ ರಚನೆಯಿದೆ. ಎಡಭಾಗದಲ್ಲಿ ಸಾಸಿವೆಕಾಳು ಗಣಪತಿ ಮೂರ್ತಿ ರಚನೆಯಿದೆ. ವೇದಿಯ ಎರಡು ಭಾಗದಲ್ಲಿ ಕಲ್ಲಿನ ರಥದ ಪ್ರತಿಕೃತಿ, ವಿಜಯನಗರ ಸಾಮ್ರಾಜ್ಯದ ವರಹಾ ಲಾಂಚನ, ಹಂಪಿ ಉತ್ಸವ–2025 ಲಾಂಚನಗಳಿವೆ. ವೇದಿಕೆ ಮಧ್ಯ ಭಾಗದಲ್ಲಿ ಮುತ್ಸದ್ದಿ ರಾಜಕಾರಣಿ ಎಂ.ಪಿ.ಪ್ರಕಾಶ್ ಹೆಸರು ಕಂಗೊಳಿಸುತ್ತಿದೆ.

ಪ್ರಧಾನ ವೇದಿಕೆಯಲ್ಲಿ ಫೆ.28 ಶುಕ್ರವಾರ ಸಂಜೆ 6 ಗಂಟೆಗೆ ಉದ್ಘಾಟನೆ ನೆರವೇರಲಿದೆ. ಮಾರ್ಚ್ 2 ವರೆಗೆ ನಡೆಯುವ ಹಂಪಿ ಉತ್ಸವದಲ್ಲಿ ನಾಡಿನ ಹೆಸರಾಂತ ಚಲನಚಿತ್ರ ನಟ ನಟಿಯರು ಭಾಗವಹಿಸುತ್ತಿದ್ದಾರೆ. ಜೊತೆಗೆ ಖ್ಯಾತ ಸಂಗೀತ ನಿರ್ದೇಶಕರು ಹಾಗೂ ಹಿನ್ನಲೆ ಗಾಯಕರು ರಸಮಂಜರಿ ಮತ್ತು ಸಂಗೀತ ಕಾರ್ಯಕ್ರಮ ನಡೆಸಿಕೊಡುವರು. ವೇದಿಕೆ ಮುಂಭಾಗದಲ್ಲಿ ಸಾರ್ವಜನಿಕರಿಗಾಗಿ ಸುಮಾರು 70 ಸಾವಿರ ಆಸನಗಳ ವ್ಯವಸ್ಥೆ ಕಲ್ಪಿಸಲಾಗಿದೆ. ವೇದಿಕೆ ಎಡಭಾಗದಲ್ಲಿ ಜರ್ಮನ್ ಟೆಂಟ್‌ನಿಂದ ನಿರ್ಮಿತವಾದ ಅತಿಗಣ್ಯರ ವಿಶ್ರಾಂತಿ ಸ್ಥಳ ಹಾಗೂ ಕಲಾವಿದರ ಪ್ರಸಾದ ಕೊಠಡಿಗಳನ್ನು ನಿರ್ಮಿಸಲಾಗಿದೆ. ವೇದಿಕೆ ಬಲಭಾಗದಲ್ಲಿ ಮಾಧ್ಯಮ ಕೇಂದ್ರ ಕಾರ್ಯನಿರ್ವಹಿಸಲಿದೆ.

ಹಂಪಿ ಉತ್ಸವದಲ್ಲಿ ಧ್ವನಿ ಬೆಳಕು ವೇದಿಕೆ ಸೇರಿ ಒಟ್ಟು ಆರು ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಎದುರು ಬಸವಣ್ಣ ವೇದಿಕೆ ರಾಯಭಾರಿ ಯನ್ನಾಗಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜೆ.ಎಂ. ವೀರಸಂಗಯ್ಯ, ಮಹಾನವಮಿ ದಿಬ್ಬ ವೇದಿಕೆಗೆ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ತೊಗಲುಗೊಂಬೆ ಕಲಾವಿದ ನಾರಾಯಣಪ್ಪ ಕಾರಿಗನೂರು ರಾಯಭಾರಿ ಯಾಗಿ ಅವರನ್ನು ನೇಮಿಸಲಾಗಿದೆ.



ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್, ಶಾಸಕ ಹೆಚ್.ಆರ್.ಗವಿಯಪ್ಪ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಅನ್ವರ್ ಭಾಷಾ, ಹುಡಾ ಅಧ್ಯಕ್ಷ ಹೆಚ್.ಎನ್.ಎಫ್ ಇಮಾಮ್ ನಿಯಾಜಿ, ಮಾಜಿ ಶಾಸಕ ಸಿರಾಜ್ ಶೇಖ್, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿ.ಪಂ.ಸಿಇಓ ಎನ್.ಎಂ. ಅಲಿ ಅಕ್ರಮ್ ಷಾ, ಎಸ್ಪಿ ಶ್ರೀಹರಿಬಾಬು ಬಿ.ಎಲ್ ಪ್ರಧಾನ ವೇದಿಕೆ ಸೇರಿದಂತೆ ಇತರೆ ವೇದಿಕೆಗಳ ಸಿದ್ದತೆಯನ್ನು ಬುಧುವಾರ ವೀಕ್ಷಿಸಿದರು.










Call Us for Advertisements
Good Opportunity for Branding
ಹಂಪಿ ಉತ್ಸವಕ್ಕೆ
ನೀವೂ ಸ್ವಾಗತ ಕೋರಲು ಬಯಸುತ್ತೀರಾ
ಇಂದೇ ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


## ಇಂದು ಹೊಸಪೇಟೆ ನಗರದಲ್ಲಿ ಹಂಪಿ ಉತ್ಸವದ ವಸಂತ ವೈಭವ ಮೆರವಣಿಗೆ

### ಮಧ್ಯಾಹ್ನ 3 ಗಂಟೆಯಿಂದ | 1125ಕ್ಕೂ ಅಧಿಕ ಕಲಾತಂಡಗಳು

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ–2025 ಆರಂಭಕ್ಕೆ ಕೇವಲ ಒಂದು ದಿನ ಬಾಕಿ ಉಳಿದಿದ್ದು ಫೆ.27 ರಂದು ಹೊಸಪೇಟೆ ನಗರದಲ್ಲಿ ವಿಜೃಂಭಣೆಯ ವಸಂತ ವೈಭವ ಮೆರವಣಿಗೆ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ನಗರದ ವಡಕರಾಯನ ದೇವಸ್ಥಾನದ ಬಳಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ವಸಂತ ವೈಭವ ಮೆರವಣಿಗೆಗೆ ಚಾಲನೆ ನೀಡುವರು. ಸುಮಾರು 125ಕ್ಕೂ ಹೆಚ್ಚು ಜಾನಪದ ಕಲಾತಂಡಗಳು ವಸಂತ ವೈಭವ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ.

> **ಮೆರವಣಿಗೆಯಲ್ಲಿ ಪ್ರಥಮ ಬಾರಿಗೆ ಅಂಬಾರಿ ಹೊತ್ತ ಆನೆ**

ಮೆರವಣಿಗೆಯಲ್ಲಿ ಮಹಿಳಾ ಜಾನಪದ ಕಲಾತಂಡಗಳು ಭಾಗವಹಿಸಲಿದ್ದು, ವೀರಗಾಸೆ, ನಗಾರಿ, ಡೋಲು,ಪೂಜಾ ಕುಣಿತ, ಪಟ ಕುಣಿತ, ಬಂಜಾರ ನೃತ್ಯ,ಚಂಡೆ ವಾದ್ಯ ಪ್ರದರ್ಶನ ನೀಡಲಿದ್ದಾರೆ. ಇದರೊಂದಿಗೆ ಕಂಸಾಳೆ, ಡೊಳ್ಳು, ಸೋಮನ ಕುಣಿತ, ಗಾರುಡಿಗೊಂಬೆ, ಬೇಡರ ವೇಷ, ಭರ್ಜಿ ವೇಷ, ಖಾಸಾ ಬೇಡರ ಪಡೆ, ನಂದಿ ಧ್ವಜ, ವೀರಗಾಸೆ, ಕಹಳೆ, ಚಾಮರ ಛತ್ರಿ, ಜಗ್ಗಹಲಗಿ, ತಮಟೆ, ಉರುಮೆ, ತುಷಾರಾಮ ಡೋಲು, ನಾಸಿಕ್ ಡೋಲು, ಹಗಲು ವೇಷ, ಸಿಂದೊಳ್ಳಿ, ಹಕ್ಕಿಪಿಕ್ಕಿ ಸೇರಿದಂತೆ ನೂರಾರು ಜಾನಪದ ಕಲಾತಂಡಗಳು ಭಾಗವಹಿಸಲಿವೆ. ಇದೇ ಪ್ರಥಮ ಬಾರಿಗೆ ಅಂಬಾರಿ ಹೊತ್ತ ಆನೆ ವಸಂತ ವೈಭವ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿದೆ.




ಹಂಪಿ ಟೈಮ್ಸ್
HAMPI TIMES

# ಜಿಂದಾಲ್‌ನಲ್ಲಿ ಬೃಹತ್ ರಕ್ತದಾನ ಶಿಬಿರ ಯಶಸ್ವಿ, 5034 ಯುನಿಟ್ ರಕ್ತ ಸಂಗ್ರಹ : ಡಿಸಿ ಪ್ರಶಾಂತ್

■ ಹಂಪಿ ಟೈಮ್ಸ್ ಬಳ್ಳಾರಿ

ಸಂಡೂರಿನ ತೋರಣಗಲ್ಲು ಬಳಿಯ ಜಿಂದಾಲ್ ನಲ್ಲಿ ಫೆ.20, 21, 22 ಮೂರು ದಿನಗಳ ಕಾಲ ಜರುಗಿದ ಬೃಹತ್ ರಕ್ತದಾನ ಶಿಬಿರವು ಯಶಸ್ವಿಯಾಗಿದ್ದು, ಒಟ್ಟು 5034 ಯುನಿಟ್ ರಕ್ತ ಸಂಗ್ರಹಿಸುವ ಮೂಲಕ ನೂತನ ದಾಖಲೆಯಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಅವರು ತಿಳಿಸಿದ್ದಾರೆ.



ಬೃಹತ್ ರಕ್ತದಾನ ಶಿಬಿರದ ಯಶಸ್ವಿ ಕುರಿತು ಮಾತನಾಡಿದ ಅವರು, ರಕ್ತದ ಅವಶ್ಯಕತೆ ಇರುವ ಜನತೆಗೆ ರಕ್ತದ ಲಭ್ಯತೆಯನ್ನು ಎಲ್ಲ ರಕ್ತಭಂಡಾರಗಳಲ್ಲಿ ಇರುವಂತೆ ನೋಡಿಕೊಳ್ಳಲು ಸಹಕಾರಿಯಾಗುವ ದಿಶೆಯಲ್ಲಿ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿ ಇತರರಿಗೆ ಪ್ರೇರಣೆ ನೀಡಲು ಸಾಕ್ಷಿಯಾದ ರಕ್ತದಾನಿಗಳಿಗೆ ಹಾಗೂ ಜಿಲ್ಲೆಯಲ್ಲಿ ರಕ್ತದ ಕೊರತೆ ನೀಗಿಸುವ ಪ್ರಯತ್ನಕ್ಕೆ ಕೈಜೋಡಿಸಿದ ಪ್ರತಿಯೊಬ್ಬರೂ ಜಿಲ್ಲಾಡಳಿತದಿಂದ ಅಭಿನಂದನೆ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ನಿರ್ವಾಹಕ ಘಟಕದ ಸಹಕಾರದೊಂದಿಗೆ ಜೆಎಸ್‌ಡಬ್ಲ್ಯು ಫೌಂಡೇಶನ್, ಜಿಂದಾಲ್ ಸ್ಟಿಲ್ ಇವರ ಸಂಪೂರ್ಣ ಬೆಂಬಲದೊಂದಿಗೆ ಫೆ.20 ರಿಂದ 22 ರವರೆಗೆ ಮೂರು ದಿನಗಳ ಕಾಲ 5000 ಯುನಿಟ್ (5000 ಜನರಿಂದ ರಕ್ತ ಸಂಗ್ರಹ) ರಕ್ತ ಸಂಗ್ರಹದ ಗುರಿ ಹೊಂದಲಾಗಿತ್ತು.

ಜಿಂದಾಲ್ ನ ಅಧಿಕಾರಿಗಳು, ಸಿಬ್ಬಂದಿಯವರು, ಫೌಂಡೇಷನ್‌ನೊಂದಿಗೆ ಕಾರ್ಯ ನಿರ್ವಹಿಸುವ ಜನರು ಸುತ್ತ-ಮುತ್ತಲಿನ ಗ್ರಾಮಗಳ ಜನರ ಸ್ವಯಂಪ್ರೇರಿತರಾಗಿ ಮುಂದೆ ಬಂದು ರಕ್ತದಾನ ಮಾಡಿದ್ದು, ಪ್ರಯತ್ನ ಮಾಡಿದರೆ ಸಾಧನೆ ಸಾಧ್ಯವೆಂಬುದಕ್ಕೆ ಮೊದಲ ದಿನ 1454, ಎರಡನೆಯ ದಿನ 1377, ಮೂರನೆಯ ದಿನ 2203 ಯುನಿಟ್ ಸಂಗ್ರಹಿಸಿರುವುದು ಸಾಕ್ಷಿಯಾಗಿದೆ ಎಂದರು.

ಇಂತಹ ಬೃಹತ್ ಗುರಿಯನ್ನು ಸವಾಲಾಗಿ ಸ್ವೀಕರಿಸಿದ ಜಿಂದಾಲ್ ಸ್ಟೀಲ್‌ನ ಪ್ರೆಸಿಡೆಂಟ್ ಪಿ.ಕೆ ಮುರುಗನ್, ಹಿರಿಯ ಉಪಾಧ್ಯಕ್ಷ (ಆಡಳಿತ) ಸುನೀಲ್ ರಾಲ್ಫ್, ಸಿಎಸ್‌ಆರ್ ಮುಖ್ಯಸ್ಥ ಪೆದ್ದಣ್ಣ, ಸಂಜೀವಿನಿ ಆಸ್ಪತ್ರೆ ಮುಖ್ಯಸ್ಥ ಡಾ.ಸನ್ನಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಅಧಿಕಾರಿ ಹಾಗೂ ಡ್ಯಾಪ್ಕೋ ಅಧಿಕಾರಿ ಡಾ.ಇಂದ್ರಾಣಿ ಹಾಗೂ ಅವರ ತಂಡ ಮತ್ತು 20 ಜನ ವೈದ್ಯರು, 200 ತಂತ್ರಜ್ಞರೊಂದಿಗೆ ಶ್ರಮಿಸಿದ 9 ರಕ್ತಭಂಡಾರದವರಿಗೂ ಅಭಿನಂದನೆ ತಿಳಿಸಿದ್ದಾರೆ.

## ನಿಮ್ಮ ಮಕ್ಕಳು ಅರಸರಾಗಬೇಕೆ?

**ಕನ್ನಡ ದಿನಪತ್ರಿಕೆ, ಪುಸ್ತಕಗಳನ್ನು ಮಕ್ಕಳ ಕೈಯಲ್ಲಿಡಿ. ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

-: ಸಂಪಾದಕರು :-
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಮಹಾಶಿವರಾತ್ರಿ ನಮಃ ಶಿವಾಯ

ಹಿಂದೂಗಳ ಪ್ರಮುಖ ಹಬ್ಬಗಳಲ್ಲಿ ಒಂದು ಮಹಾಶಿವರಾತ್ರಿ. ಈ ಹಬ್ಬವನ್ನು ದೇಶದಾದ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತದೆ. ಹಿಂದೂ ಪಂಚಾಂಗದ ಪ್ರಕಾರ ಪ್ರತಿಮಾಸದಲ್ಲೂ ಶಿವರಾತ್ರಿ ಇರುತ್ತದೆ, ಅದನ್ನು ಮಾಸಶಿವರಾತ್ರಿ ಎಂದು ಕರೆಯುತ್ತಾರೆ. ಮಾಘ ಮಾಸದ ಕೃಷ್ಣ ಪಕ್ಷದ ಚತುರ್ದಶಿ ಯಂದು ಮಹಾಶಿವರಾತ್ರಿಯನ್ನು ಆಚರಿಸಲಾಗುತ್ತದೆ. ಮಹಾ ಶಿವರಾತ್ರಿಯು ವರ್ಷಕ್ಕೆ ಒಮ್ಮೆ ಬರುತ್ತದೆ. ಈ ದಿನವನ್ನು ಶಿವನಿಗೆ ಅರ್ಪಿಸಲಾಗಿದೆ. ಈ ದಿನವೂ ಮಹಾದೇವನಿಗೆ ಪ್ರಿಯವಾದ ದಿನ.

ಶಿವರಾತ್ರಿಯ ಆಚರಣೆಗೆ ಅನೇಕ ಪೌರಾಣಿಕ ಕಥೆಗಳಿವೆ. ಮಾಘ ಬಹುಳ ಚತುರ್ದಶಿಯ ರಾತ್ರಿ ಶಿವ ಪಾರ್ವತಿಯ ವಿವಾಹವಾಯಿತೆಂದು ಪುರಾಣದ ಕಥೆಗಳಲ್ಲಿ ಉಲ್ಲೇಖಿಸಲಾಗಿದೆ. ಅಂದು ದೇವಾನುದೇವತೆ ಗಳೆಲ್ಲರೂ ಜಾಗರಣೆ ಮಾಡುವ ಮೂಲಕ ಗಿರಿಜಾ ಕಲ್ಯಾಣ ವೀಕ್ಷಿಸಿ, ಶಿವ ಪಾರ್ವತಿಯರಿಬ್ಬರನ್ನೂ ಪೂಜಿಸಿದರಂತೆ ಹೀಗಾಗಿ ಈ ದಿನ ಜಾಗರಣೆ ಪದ್ಧತಿ, ಆಚರಣೆಗೆ ಬಂದಿದೆ ಎನ್ನಲಾಗುತ್ತದೆ. ಶಿವಶಕ್ತಿಯ ಕಲ್ಯಾಣವಾದ ಶುಭದಿನವೇ ಮಹಾಶಿವರಾತ್ರಿ ಎಂದು ಹೇಳಲಾಗುತ್ತದೆ.

ಮತ್ತೊಂದು ಕಥೆಯ ಪ್ರಕಾರ ಮಹಾಶಿವರಾತ್ರಿಯನ್ನು ಶಿವನ ಸೃಷ್ಟಿ, ಸ್ಥಿತಿ ಲಯಗಳ ತಾಂಡವ ನೃತ್ಯ ಎಂದು ಹೇಳಲಾಗುತ್ತದೆ. ಶಿವ ಪುರಾಣದ ಪ್ರಕಾರ ಸಮುದ್ರ ಮಥನದ ವೇಳೆ ಉದ್ಭವವಾದ ಹಾಲಾ ಹಲವನ್ನು ಜಗತ್ತಿನ ಉಳಿವಿಗಾಗಿ ಶಿವ ಕುಡಿದಾಗ ಗಂಟಲೊಳಗಿಂದ ಇಳಿಯದಂತೆ ಪಾರ್ವತಿ ಇಡೀ ರಾತ್ರಿ ತಡೆದಳು ಎಂದು ಹೇಳಲಾಗುತ್ತದೆ. ಜೊತೆಗೆ ಭಗೀರಥನ ತಪಸ್ಸಿಗೆ ಮೆಚ್ಚಿ ಇಳೆಗೆ ಇಳಿದು ಬಂದ ಗಂಗೆಯನ್ನು ಶಿವ ತನ್ನ ಜಡೆಯಲ್ಲಿ ಇರಿಸಿಕೊಂಡಿದ್ದನು. ಇದರಿಂದ ವಿಚಲಿತನಾದ ಭಗೀರಥ ಗಂಗೆಯನ್ನು ಭೂಮಿಗೆ ಹರಿಸು ವಂತೆ ಶಿವನನ್ನು ಪ್ರಾರ್ಥಿಸಿದಾಗ ಅವನ ಭಕ್ತಿಗೆ ಮೆಚ್ಚಿದ ಶಿವ ಗಂಗೆಯನ್ನು ಹರಿಯಲು ಬಿಟ್ಟಿದ್ದು ಈ ದಿನವೇ ಎಂದು ಪುರಾಣ ಹೇಳುತ್ತದೆ.

ಶಿವನ ಆದಿ ಮತ್ತು ಅಂತ್ಯ ಹುಡುಕಲು ಹೊರಟ ವಿಷ್ಣು ಹಾಗೂ ಬ್ರಹ್ಮನಿಗೆ ಶಿವರಾತ್ರಿ ಯಂದು ಶಿವ ಲಿಂಗ ರೂಪವಾಗಿ ದರ್ಶನ ನೀಡಿದ ಎಂಬ ಪ್ರತೀತಿ ಇದೆ. ಶಿಶಿರ ಋತುವಿನ ಮಾಘ ಮಾಸದ ಕೃಷ್ಣ ಪಕ್ಷದ ಚತುರ್ದಶಿಯಂದು ರಾತ್ರಿ ವೇಳೆಯಲ್ಲಿ ಶಿವ ಪಾರ್ವತಿ ಜೊತೆಯಲ್ಲಿ ಭೂಮಿಯಲ್ಲಿ ಸಂಚರಿಸುತ್ತಾರೆ ಎಂಬ ನಂಬಿಕೆ ಇದೆ. ಆ ಸಮಯದಲ್ಲಿ ಯಾರು ಶಿವನನ್ನು ಪೂಜಿಸುವರೋ ಅವರ ಪಾಪಗಳೆಲ್ಲ ಪರಿಹಾರವಾಗುತ್ತದೆ ಎಂದು ಸ್ವತಃ ಶಿವನೇ ಹೇಳಿದ್ದಾನೆ ಎಂಬುದರ ಬಗ್ಗೆ ಶಾಸ್ತ್ರೋಕ್ತಿ ಇದೆ. ಈ ಎಲ್ಲಾ ಕಾರಣದಿಂದ ಶಿವಭಕ್ತರು ಶಿವನನ್ನು ಪೂಜಿಸಲು ಅವನ ಅನುಗ್ರಹ ಪಡೆಯಲು ರುದ್ರವನ್ನು ಪಠಿಸುತ್ತಾ ಅಭಿಷೇಕ ಮಾಡುತ್ತಾ ಶಿವ ಮಂತ್ರಗಳನ್ನು ಹೇಳುತ್ತಾ ಇಡೀ ರಾತ್ರಿ ಎಚ್ಚರವಾಗಿದ್ದು ಜಾಗರಣೆ ಮಾಡುತ್ತಾರೆ. ಅಲ್ಲದೇ ಈ ದಿನ ಈಶ್ವರನ ಆರಾಧನೆ ಮಾಡಿದರೆ ಎಂದೂ ಲಭಿಸದ ಪುಣ್ಯಫಲ ಪ್ರಾಪ್ತಿಯಾಗುತ್ತದೆ ಎಂಬ ಪ್ರತೀತಿ ಸ್ಕಂದಪುರಾಣದಲ್ಲಿದೆ



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ

Scan For Digital Colourful
HAMPI TIMES E-paper



ಮಹಾಶಿವರಾತ್ರಿಯಂದು ಹಂಪಿ ಶ್ರೀವಿರೂಪಾಕ್ಷೇಶ್ವರನಿಗೆ ಪೂಜೆ ಅಲಂಕಾರ

ಶಿವರಾತ್ರಿಯಂದು ಭಕ್ತರು ಪ್ರಾತಃ ಕಾಲದಲ್ಲೇ ಎದ್ದು ಸ್ನಾನ ಮಾಡಿ, ಮಡಿ ವಸ್ತ್ರವ ತೊಟ್ಟು, ಉಪವಾಸವಿದ್ದು, ಶಿವ ದೇವಾಲಯಕ್ಕೆ ಹೋಗಿ, ಶಿವಾರ್ಚನೆ ಅಭಿಷೇಕ ಮಾಡಿಸಿ ಶಿವನ ಪೂಜೆ ಮಾಡುತ್ತಾ ಶಿವನನ್ನು ಆರಾಧಿಸಿದರೆ ಪಾಪ ಕರ್ಮಗಳೆಲ್ಲ ಪರಿಹಾರವಾಗಿ ಜೀವನದಿ ಸುಖ ಶಾಂತಿ, ಲಭಿಸುತ್ತದೆ ಎಂಬ ನಂಬಿಕೆ ಇದೆ. ಈ ದಿನ ಶಿವನನ್ನು ಆರಾಧಿಸುವವರು ದಿನವಿಡಿ ಉಪವಾಸ ಇರುತ್ತಾರೆ. ಇದು ಮಹಿಳೆಯರಿಗೆ ಅತ್ಯಂತ ವಿಶೇಷವಾದ ಹಬ್ಬವಾಗಿದೆ. ವಿವಾಹಿತ ಮಹಿಳೆಯರು ತಮ್ಮ ಪತಿಯ ದೀರ್ಘಾಯುಷ್ಯಕ್ಕಾಗಿ ಪ್ರಾರ್ಥಿಸುತ್ತಾರೆ. ಅವಿವಾಹಿತರು ಭವಿಷ್ಯದಲ್ಲಿ ತಮಗೆ ಶಿವನಂತ ಪತಿ ಸಿಗಲೆಂದು ಬೇಡಿಕೊಳ್ಳುತ್ತಾರೆ. ಮಹಾಶಿವರಾತ್ರಿಯಂದು ಬಿಲ್ವಪತ್ರೆ ಯನ್ನು ಶಿವಲಿಂಗದ ಮೇಲಿಟ್ಟು ಪೂಜಿಸಿದರೆ ಯಾಗ ಮಾಡಿದ ಫಲ ದೊರೆಯುತ್ತದೆ ಎಂದು ಹಿರಿಯರು ಹೇಳುತ್ತಾರೆ.

ನಮ್ಮ ಪೂರ್ವಜರು ಆಚರಿಸುವ ಎಲ್ಲಾ ಹಬ್ಬಗಳ ಹಿಂದೆ ವೈಜ್ಞಾನಿಕವಾದ ಕಾರಣಗಳು ಇರುತ್ತದೆ. ಮಹಾಶಿವರಾತ್ರಿಯ ಸಮಯದಲ್ಲಿ ಚಳಿಗಾಲವು ಮುಗಿದು ಬೇಸಿಗೆಗಾಲವೂ ಆರಂಭ ವಾಗುತ್ತದೆ. ಅಂದರೆ ಈ ದಿನದಂದು ಚಳಿಯು ಹೆಚ್ಚಾಗಿದ್ದು ಕೃಷ್ಣ ಪಕ್ಷದ ಕೊನೆಯ ದಿನವಾಗಿರುತ್ತದೆ. ಈ ದಿನದಲ್ಲಿ ಸೂರ್ಯನ ಶಾಖ ಕಡಿಮೆಯಾಗಿರುತ್ತದೆ ಚಂದ್ರನ ಪ್ರಕಾಶವು ಕ್ಷೀಣಿಸಿರುತ್ತದೆ. ಶಿವರಾತ್ರಿ ಕಳೆದ ಮೇಲೆ ಶಿವ ಶಿವ ಎನ್ನುತ್ತಾ ಚಳಿ ಬಿಟ್ಟು ಹೋಗುತ್ತದೆ ಎಂಬ ನಾಣ್ಣುಡಿ ನಮ್ಮಲಿದೆ. ಈ ವ್ಯತ್ಯಯದಿಂದ ನಮ್ಮ ದೇಹದಲ್ಲಿ ಅನೇಕ ಬದಲಾವಣೆಗಳಾಗುತ್ತದೆ. ವಾತಾವರಣದ ಬದಲಾವಣೆಯಿಂದಾಗಿ ಈ ಸಮಯದಲ್ಲಿ ಉಸಿರಾಟದ ತೊಂದರೆ, ನೆಗಡಿ, ಕೆಮ್ಮು ಮುಂತಾದ ವುಗಳು ಕಂಡು ಬರುತ್ತದೆ.

ಮಹಾಶಿವರಾತ್ರಿಯ ದಿನದಂದು ಶಿವನಿಗೆ ನೀರಿನ ಅಭಿಷೇಕ ಮತ್ತು ಬಿಲ್ವಪತ್ರೆಯಿಂದ ಪೂಜೆ ಮಾಡಲಾಗುತ್ತದೆ. ಈ ಬಿಲ್ವಪತ್ರೆಯಲ್ಲಿ ಉಸಿರಾಟದ ತೊಂದರೆ ನಿವಾರಿಸುವ ಗುಣವಿದೆ. ಬಿಲ್ವಪತ್ರೆಯನ್ನು ಲಿಂಗದ ಮೇಲೆ ಹಾಕುವುದರಿಂದ ಅದರ ಪರಿಮಳವು ನಮ್ಮ ದೇಹದ ಒಳಗೆ ಹೋಗಿ ಉಸಿರಾಟದ ತೊಂದರೆಯನ್ನು ಕಡಿಮೆ ಮಾಡುತ್ತದೆ. ಶಿವಲಿಂಗವನ್ನು ವಿಶಿಷ್ಟ ಕಲ್ಲಿನಿಂದ ಮಾಡಿರುತ್ತಾರೆ. ಆ ಲಿಂಗದ ಮೇಲೆ ನೀರಿನ ಅಭಿಷೇಕ ಮಾಡುವುದರಿಂದ ವಿಶಿಷ್ಟ ಶಕ್ತಿ ಹೊರಹೊಮ್ಮುತ್ತದೆ ಮತ್ತು ಸುತ್ತಮುತ್ತಲಿಗೆಲ್ಲಾ ಹೆಚ್ಚಿನ ಶಕ್ತಿ ಯನ್ನು ಪಸರಿಸುತ್ತದೆ.

**ಬಿಲ್ವಪತ್ರೆಯು ಶಿವನಿಗೆ ಶ್ರೇಷ್ಠವಾದದ್ದು:** ಬಿಲ್ವಪತ್ರೆಯ ಎಲೆಯನ್ನು ಹೃದಯ ಭಾಗಕ್ಕೆ ಅಂದರೆ ಆತ್ಮಕ್ಕೆ ಮತ್ತು ಲಿಂಗವನ್ನು ಪರಮಾತ್ಮನ ಪ್ರತೀಕ ಎಂದು ಹೋಲಿಸಲಾಗುತ್ತದೆ ಆದ್ದರಿಂದ ಬಿಲ್ವಪತ್ರೆಯಿಂದ ಶಿವಲಿಂಗವನ್ನು ಪೂಜಿಸಿದರೆ ಆತ್ಮ ಪರಮಾತ್ಮನ ಮಿಲನವಾಗುತ್ತದೆ. ಕತ್ತಲೆ ಮತ್ತು ರಾತ್ರಿಯು ಅಜ್ಞಾನದ ಸಂಕೇತ. ಮಹಾಶಿವರಾತ್ರಿಯ ದಿನದಂದು ಎಚ್ಚರವಾಗಿದ್ದು ಮಂತ್ರಗಳನ್ನು ಪಠಿಸುತ್ತ ಶಿವರಾಧನೆ ಮಾಡಿ ಧ್ಯಾನಿಸುತ್ತಿದ್ದರೆ ನಮಗೆ ಜ್ಞಾನವು ಪ್ರಾಪ್ತಿಯಾಗುತ್ತದೆ. ಹಾಗಾಗಿ ಮಹಾಶಿವರಾತ್ರಿಯಂದು ಜಾಗರಣೆ ಮಾಡುವುದರಿಂದ ನಮಗೆ ಮೋಕ್ಷವು ಲಭಿಸುತ್ತದೆ. ಶ್ರದ್ಧಾ ಭಕ್ತಿಯಿಂದ ಶಿವನ ಧ್ಯಾನವನ್ನು ಮಾಡುತ್ತಾ ಲೋಕ ಕಲ್ಯಾಣವಾಗಲಿ ಎಂದು ಶಿವನನ್ನು ಭಕ್ತಿ ಪೂರ್ವಕವಾಗಿ ಭಜಿಸುತ್ತಾ ಅವನ ಕೃಪೆಗೆ ಪಾತ್ರರಾಗೋಣ


**ಲಲಿತಾ ಚಂದ್ರ ನಿಭಾನನ ಸುಷ್ಮಿತಮ್**
**ಶಿವ ಪದಂ ಶಿವದಾಮ್ ಸ್ಮರತಾಮ್ ಶಿವಂ ।**
**ವಿಶದಕೋಟಿ ತಟಿಪ್ರಭಯಾಯುತಂ ಶಿವ ಜಯಂ ಶಿವಯಾ ಶಿವಾಯಯುತಮ್ ।**
**ನಟನ ನಾಟ್ಯ ನಟಂ ನಟಗಾಯಕಮ್ ಜನಮುದಂ ಜಲಜಯುತ ಲೋಚನಂ ।**
**ಭುಜಗ ಭೂಷಣ ಭೂಷಿತ ವಿಗ್ರಹಮ್ ಪ್ರಣಮಹೇ ಜನತೇ ಜನವಲ್ಲಭಂ ।**
**ಶೃತಿಸತ ಪ್ರಭಯಾ ಪ್ರಭಯಾಯುತಮ್ ಹರಿ ಪದಾಬ್ಜಭವಾಂ ಶಿರಸಾದೃತಾಂ ।**
**ಶಿವ ಶಿವೇತಿ ಶಿವೇತಿ ಶಿವೇತಿವಿ ಶಿವಭವೇತಿ ಭವೇತಿ ಭವೇತಿವಾ ।**
**ಹರ ಹರ ಮಹಾದೇವ.**



ಹೊಸಪೇಟೆ ತಾಲೂಕಿನ ಧರ್ಮದಗುಡ್ಡದ ಬಳಿ ಇರುವ ಓಬಳೇಶ್ವರ ಶಿವಲಿಂಗಕ್ಕೆ ಮಹಾಶಿವರಾತ್ರಿ ನಿಮಿತ್ತ ವಿಶೇಷ ಪೂಜೆ ಸಲ್ಲಿಸಿ, ಪುಷ್ಪಲಂಕಾರ ಮಾಡಲಾಗಿತ್ತು. ಭಕ್ತರು ಬೆಳಿಗ್ಗೆಯಿಂದ ದರ್ಶನ ಪಡೆದರು. ರಾತ್ರಿ ಭಜನೆಯೊಂದಿಗೆ ಭಕ್ತರು ಶಿವನಾಮಸ್ಮರಣೆಯೊಂದಿಗೆ ಜಾಗರಣೆ ಮಾಡಿದರು.



ಹೊಸಪೇಟೆ ಮೇದಾರ್ ಓಣಿಯಲ್ಲಿರುವ ಶ್ರೀ ಓಂಕಾರೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ನಿಮಿತ್ತ ಶಿವಲಿಂಗಕ್ಕೆ ವಿಶೇಷ ಅಭಿಷೇಕ, ಪೂಜೆ ನೆರವೇರಿಸಿ, ಬಿಲ್ವಪತ್ರಿ, ಪುಷ್ಪಗಳಿಂದ ಅಲಂಕರ ಮಾಡಲಾಗಿತ್ತು. ಭಕ್ತರು ಸರದಿ ಸಾಲಿನಲ್ಲಿ ಬಂದು ದೇವರ ದರ್ಶನ ಪಡೆದರು.




ಸಂಡೂರು ತಾಲೂಕಿನ ನಾರಿಹಳ್ಳಿ ಜಲಾಶಯದ ದಡದಲ್ಲಿರುವ ಉದ್ಭವ ಶ್ರೀಗಂಡಿ ಬಸವೇಶ್ವರನಿಗೆ ಮಹಾಶಿವರಾತ್ರಿ ನಿಮಿತ್ತ ವಿಶೇಷ ಅಭಿಷೇಕ ಪೂಜೆ ನೆರವೇರಿಸಲಾಯಿತು. ಬಹುದಿನಗಳಿಂದ ದೇಗುಲ ನೀರಿನಿಂದ ಜಲಾವೃತವಾಗಿದ್ದರಿಂದ ಪೂಜೆಯಿಂದ ಭಕ್ತರು ನಿರಾಶರಾಗಿದ್ದರು. ಶಿವರಾತ್ರಿ ಪೂಜೆ ನೆರವೇರಿಸಿ ಹರ್ಷ ವ್ಯಕ್ತಪಡಿಸಿದರು.





Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಭಾವಾ (ಛತ್ರಪತಿ ಸಂಭಾಜಿ ಬೋಸ್ಲೆ)

## ಹಿಂದೂ ಸಾಮ್ರಾಜ್ಯದ ಸ್ಥಾಪನೆಯ ಹರಿಕಾರ ಛತ್ರಪತಿ ಶಿವಾಜಿಯ ಪುತ್ರ

ಜಗತ್ತಿನ ಉಳಿದ ಭಾಗಗಳಲ್ಲಿ ಮನುಷ್ಯ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದಾಗ ಭಾರತದಲ್ಲಿ ಸರ್ವ ಧರ್ಮ ಸಮನ್ವತೆಯ, ಸಾಮರಸ್ಯದಿಂದ ಒಗ್ಗೂಡಿ ಬಾಳುವ ಮಹಾನ್ ಸಂಸ್ಕೃತಿಯ ನಿರ್ಮಾಣವಾಗಿತ್ತು.ಅಖಂಡ ಭಾರತವು ಪರಕೀಯರ ಆಕ್ರಮಣಕ್ಕೆ ತುತ್ತಾಗಲಾರಂಭಿಸಿ 16 ನೇ ಮೊಘಲರು ದೆಹಲಿಯ ಸುತ್ತ ಮುತ್ತಲ ಪ್ರದೇಶಗಳನ್ನು ಆಕ್ರಮಿಸಿಕೊಂಡು ಅಂತಿಮವಾಗಿ 17ನೇ ಶತಮಾನದ ಹೊತ್ತಿಗೆ ಮೊಘಲರ ಅತ್ಯಂತ ನಿರ್ದಯಿ,ಕ್ರೂರಿಯಾದ ದೊರೆ ಔರಂಗಜೇಬನ ಕಾಲದಲ್ಲಿ ಅಖಂಡ ಭಾರತವನ್ನು ಹಿಂದೂ ಸಾಮ್ರಾಜ್ಯವನ್ನಾಗಿಸುವ ಬೃಹತ್ ಕನಸೊಂದನ್ನು ತನ್ನ ತಾಯಿಯ ಪ್ರೇರಣೆಯಿಂದ ಹೊಂದಿದ್ದ ಆ ವ್ಯಕ್ತಿ ಬಹುತೇಕ ತನ್ನ ಗುರಿಯನ್ನು ಸಾಕಾರಗೊಳಿಸುವಲ್ಲಿ ಯಶಸ್ವಿಯಾಗಿದ್ದರೆ ಅದಕ್ಕೆ ಕಾರಣ ಆತನ ಅದಮ್ಯ ದೇಶ ಭಕ್ತಿ, ಚಾಣಾಕ್ಷತೆ ಮತ್ತು ಕೆಚ್ಚೆದೆಯ ಶೌರ್ಯ ಎದುರಾಳಿಗಳ ಕಣ್ಣಲ್ಲಿ ಸಿಂಹನಂತೆ ತೋರುತ್ತಿದ್ದ ಹಿಂದೂ ಸಾಮ್ರಾಜ್ಯ ಸ್ಥಾಪಕ ಛತ್ರಪತಿ ಶಿವಾಜಿಯ ಕನಸನ್ನು ನನಸು ಮಾಡಲು ಅಹರ್ನಿಶಿ ಹೋರಾಡಿದ ಆತನ ಪುತ್ರ ಮರಿ ಸಿಂಹ ಅರ್ಥಾತ್ ಶಾವಾ ಎಂಬ ಹೆಸರಿನಿಂದ ಕರೆಯಲ್ಪಟ್ಟವರೇ

ಛತ್ರಪತಿ ಸಂಭಾಜಿ ರಾವ್ ಬೋಸ್ಲೆ.

ಪುಟ್ಟ ಮಗು ಶಂಭು ಉರ್ಫ್ ಸಂಭಾಜಿ ರಾವ್ 2 ವರ್ಷದ ಮಗುವಿದ್ದಾಗಲೇ ತಾಯಿಯನ್ನು ಕಳೆದುಕೊಂಡಿದ್ದು ತನ್ನ ಸ್ವರಾಜ್ಯದ ಕಲ್ಪನೆಯಲ್ಲಿ ತನ್ನ ಮಗ ತಬ್ಬಲಿಯಾಗಬಾರದು ಎಂದು ಆತನನ್ನು ದೂರವೇ ಇರಿಸಿದ್ದರೂ ಕೂಡ ತಂದೆಯ ಎಲ್ಲಾ ಧ್ಯೇಯೋದ್ದೇಶಗಳನ್ನು ಶೌರ್ಯ, ಸಾಹಸಗಳನ್ನು ಬಳುವಳಿಯಾಗಿ ಪಡೆದವ ಶಂಭು. ಒಂದೊಮ್ಮೆ ತಂದೆ ಮರಾಠರ ಸಾಮ್ರಾಟ ಶಿವಾಜಿ ಮತ್ತು ದೆಹಲಿ ಗದ್ದುಗೆಯ ಮೊಘಲರ ಔರಂಗಜೇಬರ ನಡುವಿನ ಮಾತುಕತೆಯನ್ನು ಏರ್ಪಡಿಸಲಾಗಿದ್ದು ಪುಟ್ಟ ಬಾಲಕ ಶಂಭು ತನ್ನ ತಂದೆಯ ಅನುಪಸ್ಥಿತಿಯಲ್ಲಿ ಔರಂಗಜೇಬನನ್ನು ಆಸ್ಥಾನಕ್ಕೆ ಬಂದು ಭೇಟಿಯಾಗುತ್ತಾನೆ. ನಿನಗೆ ಭಯವಾಗುವುದಿಲ್ಲವೇ ಎಂದು ಔರಂಗಜೇಬನು ಪುಟ್ಟ ಶಂಭುವನ್ನು ಕೇಳಿದಾಗ

ನನಗೆ ಭಯ ಹುಟ್ಟಿಸುವುದು ಗೊತ್ತಾಗುತ್ತದೆ ಎಂದು ಹೇಳಿದ ಪುಟ್ಟ ಬಾಲಕನನ್ನು ಕಂಡು ಸ್ವತಹ ಔರಂಗಜೇಬನೇ ದಂಗಾಗುತ್ತಾನೆ.

ದಿನೇಶ್ ವಿಜನ್ ನಿರ್ಮಾಣದ ಅತ್ಯಂತ ಬಿಗುವಾದ ನಿರೂಪಣೆಯನ್ನು ಹೊಂದಿರುವ ಶಾವಾ ಚಲನಚಿತ್ರದಲ್ಲಿ ಸಂಭಾಜಿ ಪಾತ್ರಧಾರಿಯಾಗಿ

ಅಭಿನಯಿಸಿರುವ ವಿಕ್ಕಿ ಕೌಶಲ್ ನಟನೆಯಲ್ಲಿ ವೀರಾವೇಶ, ತಾಯಿಯ ಪ್ರೀತಿಗಾಗಿ ಹಂಬಲಿಸುವ ಪುಟ್ಟ ಮುಗ್ಧ ಮನಸ್ಸಿನ ಯುವಕ, ಬಾಲ್ಯದಲ್ಲಿ ತಾಯಿ ಪ್ರೀತಿಯಿಂದ ವಂಚಿತನಾಗಿ ಒಂದೊಮ್ಮೆ ಆತಂಕ ಮತ್ತು

ಭಯದಿಂದ ನರಳಿದ ಪುಟ್ಟ ಬಾಲಕ ಅಜ್ಜಿಯ ಮಮತೆಯ ಮಡಿಲಿನಲ್ಲಿ ಬೆಳೆಯುತ್ತಾನಾದರೂ ಬಾಲ್ಯದ ಮಾನಸಿಕ ತೊಳಲಾಟಗಳು ಆಗಾಗ ನೆನಪಿನ ಪಟಲದಲ್ಲಿ ಹಾದು ಹೋಗುತ್ತವೆ.ಅಪಾರ ಪ್ರೀತಿಯ ಪತಿ, ಸ್ವರಾಜ್ಯಕ್ಕಾಗಿ ತನ್ನ ಜೀವನವನ್ನೇ ಮುಡುಪಾಗಿಡುವ ಶೌರ್ಯ, ತನ್ನ ವಿರುದ್ಧ ಷಡ್ಯಂತ್ರವನ್ನೇ ಮಾಡಿದ ಮಲತಾಯಿಯ ಆಶೀರ್ವಾದ ಪಡೆಯುವ ವಿನಯವಂತಿಕೆ, ತಂದೆ ಶಿವಾಜಿಯ ಕನಸನ್ನು ನನಸು ಮಾಡುವ ಹಪಹಪಿಕೆ ಸರ್ವಧರ್ಮ ಸಮನ್ವಯದ ಸ್ವರಾಜ್ಯ ಸೃಷ್ಟಿಯ ಕನಸು ಹೀಗೆ ಹತ್ತು ಹಲವು ಭಾವಗಳು ನಮ್ಮನ್ನು ಗಾಢವಾಗಿ ತಟ್ಟುತ್ತವೆ. ಸಂಭಾಜಿ ಪತ್ನಿ ಯೇಸು ಬಾಯಿಯ ಪಾತ್ರದಲ್ಲಿ ರಶ್ಮಿಕ ಮಂದಣ್ಣ ಕೂಡ ಪ್ರಬುದ್ಧವಾಗಿ ನಟಿಸಿದ್ದು ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಔರಂಗಜೇಬನ ಕ್ರೌರ್ಯ ಮತ್ತು ವಂಚನೆಗಳನ್ನು ಮೇಳಯಿಸಿಕೊಂಡ ಪಾತ್ರವಾಗಿ ಅಕ್ಷಯ್ ಖನ್ನ ಮುಂತಾದ ಪಾತ್ರಗಳು ಬಹಳ ದಿನಗಳ ಕಾಲ ನೆನಪಿನಲ್ಲಿ ಉಳಿಯುತ್ತವೆ.





ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಮರಾಠ ಸಾಮ್ರಾಟ್ ಶಿವಾಜಿಯ ಕಡು ವೈರಿಯಾದ ಔರಂಗಜೇಬನ ದೂತನು ಶಿವಾಜಿ ಮಹಾರಾಜನ ಮರಣದ ಸುದ್ದಿಯನ್ನು ತುಂಬಿದ ಸಭೆಯಲ್ಲಿ ಬಂದು ಹೇಳಿದಾಗ ತನ್ನ ಸಾಮ್ರಾಜ್ಯದಲ್ಲಿ ಸಂಭ್ರಮಾಚರಣೆ ಮಾಡಲು ಹೇಳಿದ ಕಟು ಮನಸ್ಸಿನ ಔರಂಗಜೇಬ ಕೂಡ ಅಂತಹ ವೀರ ಶಿವಾಜಿಗೆ ಮರಣವನ್ನು ಕರುಣಿಸಿ ತನ್ನ ಅತಿ ದೊಡ್ಡ ಶತ್ರುವನ್ನು ಕಳೆದುಕೊಳ್ಳುವಂತೆ ಮಾಡಿದ ಅಲ್ಲಾಹನೊಂದಿಗೆ ತನಗೆ ಮುನಿಸಿದೆ ಎಂದೂ ಛತ್ರಪತಿ ಶಿವಾಜಿಗೆ ಸ್ವರ್ಗದಲ್ಲಿ ಜಾಗ ಕೊಡು ಎಂದು ಅಲ್ಲಾಹನಲ್ಲಿ ಬೇಡಿಕೊಂಡಾಗ ಮನಸ್ಸು ಶಿವಾಜಿ ಮಹಾರಾಜರ ಕುರಿತಾದ ಅಭಿಮಾನದಿಂದ ಕೇಕೆ ಹಾಕುತ್ತದೆ. ಅಂತಿಮವಾಗಿ ಅದೇ ಔರಂಗಜೇಬನು ತನಗೆ ಪತ್ರ ತಂದು ಕೊಟ್ಟು ರಾಜಾಜ್ಞೆಯಂತೆ ಅದನ್ನು ಓದಿದ ದೂತನನ್ನು ಕೊಂದು ನನಗೆ ಶಿವಾಜಿಯ ಮಗ ಸಂಬಾಜಿಯಂತಹ ಒಂದಾದರೂ ಮಕ್ಕಳು ಹುಟ್ಟಲಿಲ್ಲ ಎಂದು ಹಲುಬಿ ಹತಾಶನಾಗಿ ಧರಾಶಾಯಿಯಾದಾಗ

ಸಂಭಾಜಿಯ ಅಪ್ರತಿಮ ವೀರತ್ವ, ಸಾವಿನಲ್ಲಿಯೂ ಮೆರೆದ ಸಂಯಮ, ಸೋತರೂ ತಲೆ ಬಾಗದ ಸ್ವಾಭಿಮಾನ, ಅವಡುಗಚ್ಚಿ ನೋವನ್ನು ಸಹಿಸಿದ ರೀತಿ ಶತ್ರುವಿನಂತಹ ಶತ್ರು ಕೂಡ ಆತನ ಕುರಿತು ಈರ್ಶೆ ಪಟ್ಟಾಗ ಕಣ್ಣಲ್ಲಿ ನೀರು ತುಂಬಿ ಗಂಟಲುಬ್ಬಿ ಬರುತ್ತದೆ.


ತಂದೆಯ ಹತಾಶ ಭಾವವನ್ನು ಕಂಡ ಔರಂಗಜೇಬನ ಮಗಳು 'ಸಂಭಾಜಿ ಸಡಗರ ಸಂಭ್ರಮದಿಂದ ಮರಣವನ್ನು ಎದುರುಗೊಂಡರೆ ನಾವು ಮೊಘಲರು ಬದುಕಿದ್ದು ಸತ್ತವಾರತಾಗಿದ್ದೇವೆ' ಎಂದು ಮೊಘಲರ ಕುರಿತು ಹೇಳಿದ್ದು ಮೊಘಲ್ ಸಾಮ್ರಾಜ್ಯದ ಅವನತಿಗೆ ಮುನ್ನುಡಿಯಂತೆ ತೋರುತ್ತದೆ.

ಪತಿಯೆಡೆಗಿನ ಪತ್ನಿಯ ವಿಶ್ವಾಸ ಸಾಂಭಾಜಿಯಲ್ಲಿ ಯುದ್ಧವನ್ನು ಹಬ್ಬದಂತೆ ಎದುರುಗೊಳ್ಳಲು ಹುರಿದುಂಬಿಸಿದರೆ, ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ಆಕೆಯ ಪ್ರೀತಿಯ ಆಸರೆಗಾಗಿ ಹಂಬಲಿಸುವ ಪುಟ್ಟ ಮಗುವಿನಂತೆ ತೋರುವ ಸಂಭಾಜಿಗಾಗಿ ಮುಂದಿನ ಜನ್ಮದಲ್ಲಿ ತಾನು ತಾಯಾಗಿ ಆತನಿಗೆ ದೊರೆಯಬೇಕಾದರೆ ಎಲ್ಲ ತಾಯಿ ಪ್ರೀತಿಯನ್ನು ಕೊಡ ಮಾಡುವೆ ಎಂದು ಹೇಳುವಾಗ ಆಕೆ ಆತನ ರಾಣಿಗಿಂತ ಹೆಚ್ಚಾಗಿ ತಾಯಿತನದ ಪ್ರತೀಕವಾಗಿ ತೋರುತ್ತಾಳೆ.

ಸಾಂಭಾಜಿಯು ತಾನು ಔರಂಗಜೇಬನೊಂದಿಗೆ ಯುದ್ಧಕ್ಕೆ ಹೋಗುತ್ತಿರುವುದು ಪತ್ನಿಗೆ ಕೊಂಚವೂ ಭಯವನ್ನು ತರುತ್ತಿಲ್ಲವೇ ಎಂದು ತನ್ನ ಪತ್ನಿಗೆ ಪ್ರಶ್ನಿಸಿದಾಗ ಆಕೆ ಹೀಗೆ ಹೇಳುತ್ತಾಳೆ" ಶಿವಾಜಿಯ ತಾಯಿ.

## ಕವಿ ಮನಸು


### ಓಂ ನಮಃ ಶಿವಾಯ



ವಿಶ್ವವೇ ತುಂಬಿರುವ
ವಿಶ್ವನಾಥನೇ
ಧರ್ಮವೇ ತಾನಾದ
ಮಂಜುನಾಥನೇ
ಪಾರ್ವತಿ ಒಡೆಯನಾದ
ಪರಮೇಶ್ವರನೇ
ಪ್ರಳಯ ಕಾಲದಿ
ರುದ್ರನಾದವನೇ
ವಿಷವನು ಕುಡಿದ
ವಿಷಕಂಠನೇ
ದುಷ್ಟರ ಸಂಹರಿಸಿದ
ಮಹಕಾಲನೇ
ಶಶಿಯ ಮುಡಿದ
ಶಶಿಧರನೇ
ಮೂರುಕಣ್ಣು ಹೊಂದಿರುವ
ಮುಕ್ಕಣ್ಣನೇ
ಗಿರಿಜೆಯ ವರಿಸಿದ
ಗಿರಿಶನೇ
ಗಂಗೆಯ ಧರಿಸಿದ
ಗಂಗಾಧರನೇ
ಶ್ರೀ ಹರಿಯ ಪ್ರಾಣಪ್ರಿಯ
ಹರಿಹರೇಶ್ವರನೇ
ಶಿವ ನಾಮವ ಮನದಿ
ಜಪಿಸಿ ಓಂ ನಮಃ ಶಿವಾಯ

- GRB

## ಆನಂದ ಬಾಣ




## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

27–02–2025 – ಗುರುವಾರ

| | |
|---|---|
| ತಿಥಿ | : ಚತುರ್ದಶಿ/ ಅಮವಾಸ್ಯೆ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಧನಿಷ್ಠ |
| ಯೋಗ | : ಶಿವ |
| ಕರಣ | : ಶಕುನಿ |
| ಸೂರ್ಯೋದಯ | : 06:51:26 |
| ಸೂರ್ಯಾಸ್ತ | : 18:28:01 |
| ರಾಹು ಕಾಲ | : 14:07–15:34 |
| ಯಮಘಂಡ ಕಾಲ | : 06:51–08:19 |
| ಗುಳಿಕ ಕಾಲ | : 09:46–11:13 |



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 26–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1608.34 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7178 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 34.424 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1587.14 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 848 ಕ್ಯುಸೆಕ್ |
| ಸಾಮರ್ಥ್ಯ | 8.804 ಟಿಎಂಸಿ |


# ಮಾರ್ಚ್ 12ಕ್ಕೆ ಗಾಣಗಟ್ಟೆ ಮಾಯಮ್ಮದೇವಿ ರಥೋತ್ಸವ ತೇರುಗಡ್ಡೆ ಹೊರ ತಂದ ಭಕ್ತರು



■ ಹಂಪಿ ಟೈಮ್ಸ್ ಕೊಟ್ಟೂರು

ತಾಲೂಕಿನ ಗಾಣಗಟ್ಟೆ ಗ್ರಾಮದ ಮಾಯಮ್ಮ ದೇವಿ ರಥೋತ್ಸವವು ಮಾರ್ಚ್ 12ರಂದು ಅಸಂಖ್ಯಾತ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಲಿದ್ದು, ಮಂಗಳವಾರ ರಥದ ಗಾಲಿ ಹೊರ ಹಾಕುವ ಧಾರ್ಮಿಕ ಕಾರ್ಯ ನೆರವೇರಿತು. ಸಾವಿರಾರು ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ತೇರು ಗಡ್ಡೆಗೆ ಹಾಗೂ ಗಣೇಶ್ ವಿಗ್ರಹಕ್ಕೆ ಪೂಜೆ ಸಲ್ಲಿಸಿ, ತೇರು ಗಡ್ಡೆಯನ್ನು ಸಕಲ ವಾದ್ಯಗಳೊಂದಿಗೆ ದೇವಸ್ಥಾನದ ಅರ್ಚಕರು, ಗ್ರಾಮದ ಆಯಾಗಾರರು ಹಾಗೂ ಮುಖಂಡರು ದೇವಸ್ಥಾನದ ಮುಂದೆ ತಂದು ನಿಲ್ಲಿಸಿದರು. ರಥೋತ್ಸವ ಅಂಗವಾಗಿ ಮಾರ್ಚ್ 11ರಂದು ಮಂಗಳವಾರ ಗಂಗೆ ಪೂಜೆ, 12ರಂದು ಬುಧವಾರ ಮಹಾರಥೋತ್ಸವ ಹಾಗೂ 13ರಂದು ಗುರುವಾರ ಮದಾಲ್ಸಿ, 14ರಂದು ಶುಕ್ರವಾರ ದೇವಿ ಗುಡಿ ತುಂಬುವ ಕಾರ್ಯದೊಂದಿಗೆ ರಥೋತ್ಸದ ಕಾರ್ಯಗಳು ಪೂರ್ಣಗೊಳ್ಳಲಿದ್ದು, ಈ ಎಲ್ಲಾ ಕಾರ್ಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗಿಯಾಗಿ ದೇವಿ ಕೃಪೆಗೆ ಪಾತ್ರರಾಗಬೇಕು ಎಂದು ದೇವಸ್ಥಾನ ಆಡಳಿತ ಮಂಡಳಿ ತಿಳಿಸಿದೆ.

# ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನಕ್ಕೆ ನಾಡಿನ ವಿವಿಧೆಡೆಯಿಂದ ಬಂದ ಭಕ್ತರು



ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕಿನ ಹಂಪಿಯಲ್ಲಿ ಮಹಾಶಿವರಾತ್ರಿ ನಿಮಿತ್ತ ಭಕ್ತರು ಬೆಳಿಗ್ಗೆಯಿಂದಲೇ ಶಿವನ ದರ್ಶನಕ್ಕಾಗಿ ಸರತಿಸಾಲಿನಲ್ಲಿ ನಿಂತು ದರ್ಶನ ಪಡೆದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 23 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಇಂಗ್ಲೀಷ್

## Models

It is a verb, that is used with another verb to indicate ideas like possibility, ability, permission or necessity is called Model verb.
The Model verb is also known as a model auxiliary verbs.
Must :-indicates necessity
Ex :1 You must leave
Will :- form the future tense, indication an action that hasn't happened yet.
Ex : I will clean the classroom.
Can:- used to express likelihood, ability
Ex – I can swim every day.
Might :- used to express possibility
Ex – I might rain today.
Should :- used to express suggestion or advice.
Ex – You should work hard to pass the exam.

**List of Model verbs :**

| | | | |
|---|---|---|---|
| Can | may | must | shall |
| Will | Ought to | would | Should |
| Could | might | Have to | Had to |

## Linkers

The word which joins the two words or two parts of the sentence is called Linkers.
Some important linkers which used regularly

| | | |
|---|---|---|
| So | But | And |
| Though | because | Also |

Ex : 1 Mohan is good worker but failed in the life.
2. Samrth and Bhuvan are broithers.
3. Though he is good person he will not do any social work.
4. She will not come to school because she is ill.


## Homophones

Homophones are words that are pronounced the same way but have different meanings. Sometimes they're spelled identically and sometimes they aren't.
When we are learning a new language, homophones can be tricky. They can even be confusing if we are a primary speaker of a language, especially when we are writing. Understanding homophones is an essential part of mastering the English language, both for vocabulary building and spelling.

**Some common examples of Homophones:**

- **brake/break :** When teaching my daughter how to drive, I told her if she didn't hit the brake in time she would break the car's side mirror.
- **cell/sell:** If you sell drugs, you will get arrested and end up in a prison cell.
- **cent/scent:** I won't spend one cent on a bottle of perfume until I know that I love the scent.
- die/dye: If you accidentally drank a bottle of fabric dye, you might die.
- **flour/flower:** To bake a flower-shaped cake, you'll need some flour.
- **for/four:** I purchased four new pairs of shoes for my upcoming vacation.
- **heal/heel:** If the heel breaks on your shoe, you might fall. However, your injuries will heal over time.
- **hear/here:** I wanted to sit here so I could hear the singer performing without any distractions.
- **hour/our:** We have one hour before our appointment with the real estate agent.
- **idle/idol:** Being idle makes me unhappy, but listening to my idol Taylor Swift makes me happy.
- **knight/night:** The knight is on his way to the castle, but traveling at night is very dangerous.
- **knot/not:** I do not know how she learned to tie the knot to make that necklace.
- **poor/pour:** I pour drinks at a bar every night. I am poor because I have too many bills and not enough money.
- **right/write:** There is no right way to write a great novel.
- **sea/see:** At my beach house, I love to wake up and see the sea.
- **sole/soul:** I need to get a new sole put on my favorite pair of running shoes. Jogging is good for my soul.
- **son/sun:** My son is 13 years old. He likes to spend time outside in the sun.
- **steal/steel:** Someone who decides to steal a car has committed a crime, but auto parts are made of steel.
- **tail/tale:** My cat was crazily chasing his tail while I read a fairy tale to my children.
- **weather/whether:** I don't know whether to bring a jacket or not. The weather looks unpredictable today.

www.hampitimes.com - Hampi Times Margadarshi



Prepared by : RB Gurubasavaraj Teacher. GHS Basarakodu. H.B.Halli Taluk. Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

# ನಾಡಿನ ಸುಭೀಕ್ಷೆಗೆ ತುಂಗಭದ್ರೆಗೆ ಆರತಿ

## ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ಶಾಸಕ ಎಚ್.ಆರ್.ಗವಿಯಪ್ಪ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತುಂಗಭದ್ರೆಗೆ ಬಾಗಿನ ಅರ್ಪಿಸಿ ಪ್ರಾರ್ಥನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವದ ಅಂಗವಾಗಿ ಬುಧವಾರ ಸಂಜೆ ವಿರೂಪಾಕ್ಷೇಶ್ವರ ದೇವಸ್ಥಾನ ಹಿಂಭಾಗದ ನದಿ ತಟದಲ್ಲಿ ಸಚಿವ, ಶಾಸಕ ಹಾಗೂ ಅಧಿಕಾರಿಗಳು ತಾಯಿ ಭುವನೇಶ್ವರಿ ದೇವಿಗೆ ಕುಂಕುಮಾರ್ಚನೆ ಹಾಗೂ ಅಭಿಷೇಕ ನೆರವೇರಿಸಿ, ತುಂಗಭದ್ರೆಗೆ ತುಂಗಾರತಿ ಮಾಡುವ ಮೂಲಕ ನಾಡಿನ ಸುಭೀಕ್ಷೆಗೆ ಪ್ರಾರ್ಥಿಸಿದರು.

ವಸತಿ, ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಸೇರಿದಂತೆ ಗಣ್ಯಮಾನ್ಯರು ತುಂಗಾಭದ್ರ ನದಿಗೆ ಹೂವು, ಕ್ಷೀರ, ತುಪ್ಪ, ಮರದ ಬಾಗಿನ ಸಮರ್ಪಿಸಿದರು. ಗಂಗೆ ಸೇರಿದಂತೆ ನಾಡಿನ ಪವಿತ್ರ ನದಿಗಳು, ವರುಣ ದೇವನನ್ನು ಸ್ಮರಿಸಿ ತುಂಗಾರತಿ ಕೈಗೊಳ್ಳಲಾಯಿತು.ಈ ಬಾರಿ ನಾಡಿನಾದ್ಯಂತ ಉತ್ತಮ ಮಳೆಯಾಗಿ, ಎಲ್ಲ ನದಿಗಳು ತುಂಬಿ ಹರಿಯಲಿ. ಜಲಾಶಯಗಳು ಭರ್ತಿಯಾಗಿ, ರೈತರು ಉತ್ತಮ ಬೆಳೆ ಬೆಳೆದು ನಾಡು ಸುಭೀಕ್ಷವಾಗಲಿ ಎಂದು ಹಂಪಿ ವಿರೂಪಾಕ್ಷೇಶ್ವರ ಸೇರಿದಂತೆ ಸಮಸ್ತ ದೇವತೆಗಳಲ್ಲಿ ಪ್ರಾರ್ಥಿಸಲಾಯಿತು.

ವಿರೂಪಾಕ್ಷ ವಿದ್ಯಾರಣ್ಯ ಗುರುಗಳು, ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಶ್ರೀನಾಥ ಹಾಗೂ ಮೋಹನ್ ಜೋಶಿ ನೇತೃತ್ವದ ತಂಡ ತುಂಗರಾತಿ ಕಾರ್ಯಕ್ರಮವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿದರು. ಶಾಸಕ ಹೆಚ್.ಆರ್. ಗವಿಯಪ್ಪ ಮತ್ತು ಅವರ ಪತ್ನಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಧರ್ಮಪತ್ನಿ ಸಮೇತವಾಗಿ ತುಂಗಾರತಿ ಸಂಕಲ್ಪ ಕೈಗೊಂಡರು.

ಜಿ.ಪಂ.ಸಿಇಓ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು.ಬಿ.ಎಲ್ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಸಹಾಯಕ ಆಯುಕ್ತ ವಿವೇಕ್, ತಹಶೀಲ್ದಾರ್ ಶೃತಿ ಮಾಳಪ್ಪ ಗೌಡ, ಡಿಹೆಚ್ಓ ಶಂಕರ್ ನಾಯ್ಕ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗರಂಗಣ್ಣನವರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ತುಂಗಾರತಿ ಅಂಗವಾಗಿ ಬಾನಂಗಳದಲ್ಲಿ ಪಟಾಕಿ ಸಿಡಿಸಿ ಸಂತಸ ಹಂಚಿಕೊಳ್ಳಲಾಯಿತು.ಹೊಸಪೇಟೆ ನಗರದ ಗಗನ ಮತ್ತು ಅವರ ತಂಡ ಭರತನಾಟ್ಯ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಗಳನ್ನು ಪ್ರಸ್ತುತ ಪಡಿಸಿದರು.












## ಸಾರ್ವಜನಿಕರಿಗೆ ವಿಐಪಿ ಪಾಸ್ ನೀಡಿ ಆಹ್ವಾನಿಸಿದ ಡಿಸಿ ಶಾಸಕ ಎಚ್.ಆರ್.ಗವಿಯಪ್ಪರಿಂದ ಉಚಿತ ಆಹಾರ ವ್ಯವಸ್ಥೆ





■ **ಹಂಪಿ ಟೈಮ್ಸ್ ಹೊಸಪೇಟೆ**

ಫೆ.28 ರಿಂದ ಮಾರ್ಚ್ 2 ವರೆಗೆ ನಡೆಯಲಿ ರುವ ಹಂಪಿ ಉತ್ಸವಕ್ಕೆ ಸ್ವತಃ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೊಸಪೇಟೆ ನಗರದ ಇಂದಿರಾ ನಗರ, ಮುಕ್ತಿಧಾಮ ಸೇರಿದಂತೆ ವಿವಿಧ ಬಡಾವಣೆ ಗಳಿಗೆ ತೆರಳಿ ಸಾರ್ವಜನಿ ಕರನ್ನು ಆಹ್ವಾನಿಸಿ, ವಿಐಪಿ ಪಾಸುಗಳನ್ನು ಬುಧವಾರ ವಿತರಿಸಿದರು.

ಹಂಪಿ ಉತ್ಸವ ಎಂದರೆ ಜನರ ಉತ್ಸವ, ಜನರು ಬಂದರಷ್ಟೇ ಹಂಪಿ ಉತ್ಸವಕ್ಕೆ ಕಳೆ ಬರುತ್ತದೆ. ಸಾರ್ವಜನಿಕರಿಗೆ ಅನುಕೂಲ ವಾಗಲಿ ಎಂದು ಸಾಕಷ್ಟು ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಮುಖ್ಯ ವಾಗಿ ಉತ್ಸವ ನಡೆಯುವ 3 ದಿನಗಳ ಕಾಲ ಹೊಸಪೇಟೆಯಿಂದ ಹಂಪಿಗೆ ಹಾಗೂ ಕಂಪ್ಲಿ ಪಟ್ಟಣದಿಂದ ಹಂಪಿಗೆ ಉಚಿತ ಸಾರಿಗೆ ಬಸ್ ಸೌಲಭ್ಯ ಕಲ್ಪಿಸಲಾಗಿದೆ. ಹೊಸಪೇಟೆಯಿಂದ 30 ಹಾಗೂ ಕಂಪ್ಲಿ ಪಟ್ಟಣದಿಂದ 10 ಸಾರಿಗೆ ಬಸ್‌ಗಳು ಹಂಪಿಗೆ ಸರಿತಿಯಲ್ಲಿ ಕಾರ್ಯಾ ಚರಣೆ ನಡೆಸಲಿವೆ. ಮೊದಲ ದಿನ ಉದ್ಘಾಟನೆ ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲ ಗ್ರಾಮಗಳಿಂದ ಹಂಪಿಗೆ ಉಚಿತ ಬಸ್ ಸೇವೆ ಒದಗಿಸಲಾಗಿದೆ. ಶಾಸಕ ಹೆಚ್. ಆರ್.ಗವಿಯಪ್ಪನವರು ಹಂಪಿಯ ಕೃಷ್ಣ ಮಂದಿರ ಎದುರು ಸಾರ್ವಜನಿಕರಿಗೆ ಉಚಿತ ಆಹಾರದ ವ್ಯವಸ್ಥೆ ಮಾಡಿದ್ದಾರೆ.

ಪೊಲೀಸ್ ಇಲಾಖೆಯಿಂದ ಸಾರ್ವಜನಿಕ ರಕ್ಷಣೆ ಹೆಚ್ಚಿನ ಒತ್ತು ನೀಡಲಾಗಿದೆ. ಸುಮಾರು 500 ಸಿ.ಸಿ.ಟಿವಿ ಕ್ಯಾಮರಾಗಳನ್ನು ಅಳವಡಿಸ ಲಾಗಿದೆ. ಪ್ರಧಾನ ವೇದಿಕೆ ಬಳಿ 150 ಎಕರೆ ಜಮೀನಿನಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸ ಲಾಗಿದೆ. ಏಕಮುಖ ಸಂಚಾರಕ್ಕೆ ಅನುಮಾಡಿ ಕೊಡಲಾಗಿದ್ದು, ಕಡ್ಡಿರಾಂಪುರ ಮಾರ್ಗದಿಂದ ಹಂಪಿ ಪ್ರವೇಶ ಹಾಗೂ ಕಮಲಾಪುರ ಮಾರ್ಗದಿಂದ ಹಂಪಿಯಿಂದ ಹೊರಕ್ಕೆ ಅವಕಾಶ ನೀಡಲಾಗಿದೆ. ಉತ್ಸವದ ಸ್ಥಳದಲ್ಲಿ ಸಹಾಯವಾಣಿ ಸಾರ್ವಜನಿಕ ಉದ್ಘೋಷ ಕೇಂದ್ರಗಳನ್ನು ತೆರೆಯಲಾಗಿದೆ.

ಬೇಸಿಗೆ ಹೆಚ್ಚಿರುವ ಕಾರಣ 25 ಕಡೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಆರೋಗ್ಯ ಇಲಾಖೆಯಿಂದ 10 ಜಾಗದಲ್ಲಿ ತಾತ್ಕಾಲಿಕ ಆರೋಗ್ಯ ಕೇಂದ್ರಗಳನ್ನು ತೆರೆಯ ಲಾಗಿದೆ. ಕೃಷಿ, ತೋಟಗಾರಿಕೆ, ಮೀನುಗಾರಿಕೆ ಇಲಾಖೆಯಿಂದ ಕೃಷಿ, ತೋಟಗಾರಿಕೆ ಹಾಗೂ ಮತ್ಸ್ಯ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಉತ್ಸವ ಆಗಮಿಸುವ ಸಾರ್ವಜನಿಕರು ಆಹಾರ ಮೇಳದಲ್ಲಿ ಭಾಗ ವಹಿಸಿ ತರಹೇವಾರಿ ಖಾದ್ಯಗಳನ್ನು ಸ್ವಂತ ಖರ್ಚಿನಲ್ಲಿ ಸವಿಯಬಹುದು.

ಉತ್ಸವದ ಪ್ರಧಾನ ವೇದಿಕೆಯಲ್ಲಿ ಚಿತ್ರನಟರಾದ ಸೇರಿದಂತೆ ಕಿರುತೆರೆ ಹಾಗೂ ಹಿರಿತೆರೆ ಕಲಾವಿದರು ಪಾಲ್ಗೊಳ್ಳುವರು.

ಸಾರ್ವಜನಿಕರು ಪೊಲೀಸರು, ಅಧಿಕಾರಿ ಗಳು ನೀಡುವ ಸೂಚನೆ ಪಾಲಿಸಿ, ತುಂಗ ಭದ್ರಾ ನದಿಯ ಅಪಾಯಕಾರಿ ಸ್ಥಳಗಳಲ್ಲಿ ನೀರಿಗೆ ಇಳಿಯದಂತೆ ಎಚ್ಚರ ವಹಿಸಿಬೇಕು. ಹೊಸದಾಗಿ ಮದುವೆಯಾದ ಜೋಡಿಗಳು, ಚಿಕ್ಕಪುಟ್ಟ ಮಕ್ಕಳು, ಹಿರಿಯರು ಸಕುಟುಂಬ ಸಮೇತರಾಗಿ ಹಂಪಿ ಉತ್ಸವ–2025 ಸಾಕ್ಷಿ ಯಾಗಬಹದು. ಜಿಲ್ಲೆಯ ಎಲ್ಲ ಜನತೆಗೆ ಜಿಲ್ಲಾಧಿಕಾರಿ ಕರೆಯೋಲೆ ನೀಡಿ ಆಮಂತ್ರಿಸಿದ್ದಾರೆ.



ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ನಂ 1
ಜಿಲ್ಲಾಮಟ್ಟದ ದಿನಪತ್ರಿಕೆ

Hampi Utsava attracts lakhs of visitors, making it the perfect time to showcase your brand. Book your ad now and take advantage of our Limited-Time Utsav Discount!

WHY ADVERTISE WITH US?

Widespread Reach – housands of dedicated readers across the region.

Targeted Local Audience – Connect with local customers and tourists.

Affordable & Effective – Cost-effective ad packages with maximum visibility.

Print + Digital Impact – Reach audiences through both newspaper and online platforms.

Trusted Reputation – A credible news source with a strong community presence.

We offer Flexible advertising plans to suit your business needs Quarter/half/FullPage Ad

About Hampi Times
Hampi Times is a leading local Daily newspaper dedicated to delivering accurate and insightful news. With a strong readership across the region, we offer a powerful platform for businesses to reach their target Readers effectively!

Call Us for more info :M: 9448633038
www.hampitimes.com/epaper.hampitimes.com
50% OFF

